ಮಾಲೀಕ ಅಂತೆ ಮಾಲೀಕ. ಮಾಲೀಕನಿಗೆ ಧಿಕ್ಕಾರ! ಮಾಲೀಕನಿಗೆ ಧಿಕ್ಕಾರ!' ಕೂಕ್ಕೋತಾ ಜಂಬಂಣ ಬಂಡಿ ಸಿದ್ದಪ್ಪನ ಎದೆಯನ್ನು ಜೋರಾಗಿ ತಳ್ಳಿದ. ಅದೆಂಗೆ ತಳ್ಳಿದ್ದ ಅಂದ್ರೆ ಬಂಡಿ ಸಿದ್ದಪ್ಪ ತಡಬಡಾಯಿಸುತ್ತಾ ಬಾಗಿಲ ಹೊರಗೆ ಹೋಗಿ ಬಿದ್ದ. ಅವನ ಗರಿಗರಿ ಬಿಳಿ ಬಟ್ಟೆ ಒಂದೇ ಏಟಿಗೆ ಹಸಿರು ಪಾಚಿ ಬಣ್ಣಕ್ಕೆ ತಿರುಗಿತ್ತು. ಗಬ್ಬು ವಾಸನೆ ಬೇರೆ. ಬಂಡಿ ಸಿದ್ದಪ್ಪ ಅಂಗತ್ತ ಬಿದ್ದಿದ್ದು ನೋಡಿ ಜನ ಚಪ್ಪಾಳೆ ತಟ್ಟಿದರು. ಕೊಚ್ಚೆಯಲ್ಲಿ ಬಿದ್ದಿದ್ದು, ವಠಾರದ ತನ್ನ ಬಾಡಿಗೆ ಜನರ ಮುಂದೆ ಬಿದ್ದಿದ್ದು, ಅದೇ ಬಾಡಿಗೆ ಜನ ಚಪ್ಪಾಳೆ ತಟ್ಟಿದ್ದು, ತನಗಾದ ಸೋಲು...



ಬಂಡಿ ಸಿದ್ದಪ್ಪ ಕಂಗೆಟ್ಟ. ಯಿವತ್ತು ಯಿದುನ್ನ ಹಿಂಗೇ ಬಿಟ್ರೆ ನಾಳೆ ಈ ವಠಾರ ತನ್ನ ಕೈ ಬಿಡತ್ತೆ, ಯೇನಾರಾ ಮಾಡಬೇಕು, ಯೀಗಲೇ, ಅನಿಸಿ ಅಲ್ಲೇ ಬಿದ್ದಿದ್ದ ಒಂದು ದೊಡ್ಡ ಕಲ್ಲನ್ನೆತ್ತಿ ಜಂಬಂಣನ ಕಡೆ ನುಗ್ಗಿದ. ಜಂಬಂಣ ಹೆಂಗಸಿಗೆ ಸಾಂತ್ವನ ಹೇಳ್ತಿದ್ದ. ಬೆನ್ನ ಕಡೆ ನುಗ್ಗಿದ ಬಂಡಿ ಸಿದ್ದಪ್ಪ ಅವನಿಗೆ ಕಾಣಲಿಲ್ಲ. ಅವನಿಗೆ ಗೊತ್ತಾಗೋದ್ರಲ್ಲಿ ಬಂಡಿ ಸಿದ್ದಪ್ಪ ಕಲ್ಲನ್ನು ಜಂಬಂಣನ ತಲೆಗೆ ಕುಟ್ಟಿದ್ದ. ಜಂಬಂಣ ನೆಲಕ್ಕೆ ಬಿದ್ದರೂ ಬಿಡಲಿಲ್ಲ, ಇನ್ನೂ ವಂದೆರಡು ಸತಿ ಕುಟ್ಟಿದ. ಒಂದೇ ಸೆಕೆಂಡು, ಜಂಬಂಣ ನೆಟ್ಟಗೆ ಭಗವಂತನ ಎದುರು ನಿಂತಿದ್ದ.

* * *

'ಬಂದ್ಯೇನಪಾ ಜಂಬಣ್ಣ?'

'ಜಂಬಂಣ.'

'ಯೇನು ಹಂಗಂದ್ರೆ.'

'ನನ್ನೆಸ್ರು ಜಂಬಂಣ.'

'ನಾನಂದಿದ್ದೂ ಅದೇ ಅಲೇನಪಾ?'

'ನೀನು ಹೇಳಿದ್ದು ಜಂಬಣ್ಣ.'

'ಸರಿ ಹಂಗೇ ಆಗಲಿ ತಗ. ಮತ್ತೆ ಬಂದ್ಯಲ್ಲಾ.' ಭಗವಂತ ಯಮಧರ್ಮನ ಕಡೆ ತಿರುಗಿ 'ಯೇನು ಮಾಡ್ತೀ ಯಿವನುನ್ನ?'

'ಯೇನು ಮಾಡದು? ಜಾಸ್ತಿ ಟೈಮ್ ಹಿಡಿಯಲ್ಲ ಯಿವನ ಜಾತಕ ನೋಡಕೆ.'

'ಯೇನೇ ಆದ್ರೂ ರೂಲ್ಸು ಅಂದ್ರೆ ರೂಲ್ಸು. ಸೊಲ್ಪ ಯಿವನ ಲೆಕ್ಕ ಓದ್ನೋಡು.'

'ಹೇಳ್ಕಳಾಂಥದ್ದೇನಿಲ್ಲ. ವಂದಿಷ್ಟು ದಾನ ಧರ್ಮ ಮಾಡಿದನೆ. ಮಾಡಿದ್ದುನ್ನೆಲ್ಲಾ ಲೆಕ್ಕ ಬರೆದಿಟ್ಕಂಡಿದನೆ. ಯಾವನಾರ ಲೆಕ್ಕ ಬರೆದು ದಾನ ಧರ್ಮ ಮಾಡ್ತಾರಾ? ಅಂದ್ರೆ ಸೊರ್ಗಕ್ಕೆ ಸೇರ್ಕಂಬೇಕೂ ಅಂತಾನೇ ದಾನ ಧರ್ಮ ಮಾಡಿದನೆ.'

ಜಂಬಂಣ ಏನೋ ಹೇಳಕೆ ಬಾಯಿಬಿಟ್ಟ, ಆದ್ರೆ ಯಮಧರ್ಮ ಅವನಿಗೆ ಮಾತಾಡಕೇ ಬಿಡಿಲ್ಲ. 'ವಂದು ವಳ್ಳೇ ಕೆಲಸ ಮಾಡಿದನೆ. ತಾನೇ ಮಾಲೀಕ ಆಗಿದ್ದೂ ಮಾಲೀಕರಿಗೆ ಧಿಕ್ಕಾರ ಅಂತ ಸಾಯಕೆ ಹತ್ತು ಸೆಕೆಂಡ್ ಮುಂಚೆ ಕೂಕ್ಕಂಡಿದನೆ.'

ಯಮಧರ್ಮ ಹೇಳಿದ್ದನ್ನು ಕೇಳಿದ ಕೂಡಲೇ ಭಗವಂತ ಛಂಗನೆ ಜಿಗಿದ. ಆನಂದದಲ್ಲಿ ಕೂಕ್ಕೊಂಡ, 'ಯಿದ್ದು, ಯಿದ್ದು. ವಾಹ್! ವಾಹ್! ಮಾಲೀಕನಿಗೆ ಧಿಕ್ಕಾರ!' ಆನಂದ ತಡೆಯಲಾರದೇ ತನ್ನ ದೇವಭಾಷೆಯಲ್ಲಿ ಉದ್ಗರಿಸಿದ, 'ಅಹೋ ಕೀದೃಶೀ ಸುಂದರಾ ವಾಕ್! ಸುಂದರಮ್! ಅತಿ ಸುಂದರಮ್. ಆನಂದಾತ್ ಬಾಷ್ಪಂ ವರ್ಷತಿ ಮೇ ನಯನಮ್.' ಹಂಗೇ ದೇವದೂತರಿಗೆ ಆಜ್ಞೆ ಮಾಡಿದ, 'ಕಸ್ತತ್ರ ಭೋ? ಸ್ವರ್ಗದ್ವಾರಂ ಉದ್ಘಾಟಯ.'

ಅದೆಷ್ಟೋ ದಶಕಗಳಿಂದ ಯಾರಿಗೂ ತಗೀದೇ ತುಕ್ಕು ಹಿಡಿದಿದ್ದ ಸ್ವರ್ಗದ ಬಾಗಿಲುಗಳು ಗಡಗಡ ಸದ್ದು ಮಾಡುತ್ತಾ ತೆಕ್ಕೊಂಡ್ವು. ಭಗವಂತ ಅವನ ತಲೆಗೆ ಒಂದು ಪ್ರಭಾವಳಿ ಸಿಗಿಸಿ, ವಳಕ್ಕೋಗು ಅಂದ. ಜಂಬಂಣ ಸೊರ್ಗದ ಹೊಸಿಲು ದಾಟಿ ವಳಗೆ ಕಾಲಿಟ್ಟ. ●